## 12. ಹಾಂಕಾಂಗ್ ಮೇಲೆ ಚೀನಾ ಕಪಿಮುಷ್ಟಿಗೆ ಸಂಸತ್ ಸಮ್ಮತಿ

ಹಾಂಕಾಂಗ್ ಮೇಲೆ ಚೀನಾದ ಹಿಡಿತ ಬಲಗೊಳಿಸಲು ಅವಕಾಶ ಕಲ್ಪಿಸುವ ರಾಷ್ಟ್ರೀಯ ಭದ್ರತಾ ಕಾಯ್ದೆಗೆ ಚೀನಾ ಸಂಸತ್ ಅನುಮೋದನೆ ನೀಡಿದೆ. ಅವಿರೋಧವಾಗಿ ಅಂಗೀಕಾರಗೊಂಡಿರುವ ಈ ಮಸೂದೆಯನ್ನು ಕಮ್ಯುನಿಸ್ಟ್ ಪಕ್ಷದ ಸ್ಥಾಯಿ ಸಮಿತಿಗೆ ಕಳುಹಿಸಿಕೊಡಲಾಗಿದ್ದು, ಆಗಸ್ಟ್‌ನಲ್ಲಿ ಕಾಯ್ದೆ ಜಾರಿಗೆ ಬರುವ ಸಾಧ್ಯತೆ ಇದೆ.

ಹಿಂದೊಮ್ಮೆ ಬ್ರಿಟಿಷ್ ವಸಾಹತು ಎನಿಸಿದ್ದ ಹಾಂಕಾಂಗ್ ಬಳಿಕ ಚೀನಾ ತೆಕ್ಕೆಗೆ ಬಂದಿತ್ತು. ಅಲ್ಲಿ ಒಂದು ದೇಶ ಎರಡು ವ್ಯವಸ್ಥೆ (ಚೀನಾದ ನಿಯಂತ್ರಿತ ಪ್ರದೇಶ) ಜಾರಿಯಲ್ಲಿದೆ. ಕಾನೂನು ಸುವ್ಯವಸ್ಥೆ, ಆಡಳಿತ, ಭದ್ರತೆಯನ್ನು ಹಾಂಕಾಂಗ್ ಕಾನೂನು ವ್ಯವಸ್ಥೆ ನಿಯಂತ್ರಿಸುವ ಅಧಿಕಾರ ಚೀನಾಕ್ಕೆ ದೊರೆಯಲಿದೆ. ಯಾರಾದರೂ ಚೀನಾದ ಕಾನೂನಿನ ವಿರುದ್ಧವಾಗಿ ನಡೆದುಕೊಂಡರೆ ಅದು ಅಪರಾಧ ಎನಿಸಿಕೊಳ್ಳಲಿದೆ. ಚೀನಾದ ಭದ್ರತಾ ಸಂಸ್ಥೆಗಳು ಹಾಂಕಾಂಗ್‌ನಿಂದಲೇ ಕಾರ್ಯನಿರ್ವಹಿಸಬಹುದಾಗಿದೆ. ಇದಕ್ಕೆ ಹಾಂಕಾಂಗ್‌ನಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ.

ಆಧಾರ:ಕನ್ನಡಪ್ರಭ, ದಿನಾಂಕ: 29.05.2020